**ಕರ್ನಾಟಕ ಸರ್ಕಾರ**

ಸಂ: ಆಇ (ವಿ) 05 ಪಿಇಎನ್ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 16.07.2019.

**ಸುತ್ತೋಲೆ**

ವಿಷಯ: ಲೆಕ್ಕಶೀರ್ಷಿಕೆ 0071 ಅಡಿ ಹೆಚ್ಚುವರಿಯಾಗಿ/ತಪ್ಪಾಗಿ ಜಮೆಯಾಗಿರುವ ಎನ್.ಪಿ.ಎಸ್. ವಂತಿಗೆಯನ್ನು ಹಿಂಪಡೆಯುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಆದೇಶ ಸಂ : ಆಇ (ಎಸ್.ಪಿ.ಎಲ್) 04 ಪಿಇಟಿ 2005, ದಿನಾಂಕ : 31.03.2006.
2. ಸರ್ಕಾರದ ಆದೇಶ ಸಂ:ಆಇ (ಎಸ್.ಪಿ.ಎಲ್) 01 ಪಿಇಎನ್ 2010, ದಿನಾಂಕ : 20.10.2010.
3. ಸರ್ಕಾರದ ಆದೇಶ ಸಂ:ಆಇ (ಎಸ್.ಪಿ.ಎಲ್) 219 ಪಿಇಎನ್ 2012, ದಿನಾಂಕ : 30.01.2014.

*********

ಮೇಲೆ ಉಲ್ಲೇಖಿತ (1) ರ ಸರ್ಕಾರದ ಆದೇಶದಲ್ಲಿ ದಿನಾಂಕ : 01.04.2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ಸೇರುವ ಎಲ್ಲಾ ಸರ್ಕಾರಿ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಮೇಲೆ ಉಲ್ಲೇಖಿತ (2) ರ ಸರ್ಕಾರದ ಆದೇಶದಲ್ಲಿ ದಿನಾಂಕ : 01.01.2004 ರಿಂದ ಸೇವೆಗೆ ಸೇರಿರುವ ಅಖಿಲ ಭಾರತ ಸೇವೆಯ (ಕರ್ನಾಟಕ ಕೇಡರ್) ಅಧಿಕಾರಿಗಳಿಗೆ ಎನ್.ಪಿ.ಎಸ್. ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಮೇಲೆ ಉಲ್ಲೇಖಿತ (3) ರ ಸರ್ಕಾರದ ಆದೇಶದಲ್ಲಿ ನಿಯೋಜನೆ ಮೇರೆಗೆ ಸ್ವಾಯತ್ತ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎನ್.ಪಿ.ಎಸ್. ನೌಕರರಿಗೆ / ಅಧಿಕಾರಿಗಳಿಗೆ ನೂತನ ಪಿಂಚಣಿ ಯೋಜನೆ ಅನುಷ್ಠಾನಗೊಳಿಸಬೇಕೆಂದು ಆದೇಶಿಸಲಾಗಿದೆ.

ಕೆಲವೊಂದು ಸ್ವಾಯತ್ತ ಸಂಸ್ಥೆಗಳಲ್ಲಿ ಎನ್.ಪಿ.ಎಸ್. ಅನುಷ್ಠಾನಗೊಳಿಸದೇ ಇರುವ ಅವಧಿಯಲ್ಲಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸಿ ಮಾತೃ ಇಲಾಖೆಗೆ ಹಿಂದಿರುಗಿರುವ ನೌಕರರ ನಿಯೋಜನಾ ಅವಧಿಯ ಉದ್ಯೋಗದಾತರ ವಂತಿಗೆಯ ಒಟ್ಟು ಮೊತ್ತವನ್ನು (Employer contribution) ಹಾಗೂ ನಿಯೋಜನಾ ಅವಧಿಯ ನೌಕರರ ವಂತಿಗೆಯ ಒಟ್ಟು ಮೊತ್ತವನ್ನು ಲೆಕ್ಕಶೀರ್ಷಿಕೆ 0071–01–800–3–01ಗೆ ಜಮೆ ಮಾಡಬಹುದಾಗಿದೆ. ಹೀಗೆ ಜಮೆ ಮಾಡಿರುವ ಮೊತ್ತವನ್ನು ಲೆಕ್ಕಶೀರ್ಷಿಕೆ 0071–01–900–0–00 (Deduct refunds) ರಿಂದ ಡ್ರಾ ಮಾಡಲು ಅನುಮತಿ ನೀಡಿದೆ.

ಈ ರೀತಿಯ ಪ್ರಕರಣಗಳಲ್ಲಿ ಸಂಬಂಧಪಟ್ಟ ಖಜಾನೆಯವರು ಎನ್.ಪಿ.ಎಸ್. ಘಟಕದಿಂದ ಅನುಮತಿ ಪಡೆದು ನೌಕರರ ಹಾಗೂ ಸರ್ಕಾರದ (ಉದ್ಯೋಗದಾತರ) ಎರಡೂ ವಂತಿಗೆ ಇದ್ದಲ್ಲಿ CRA ರವರ File Preparation Utility ಉಪಯೋಗಿಸಿಕೊಂಡು SCF ಅಪ್‌ಲೋಡ್ ಮಾಡಿ ಅಥವಾ ನೌಕರರ/ಉದ್ಯೋಗದಾತರ ಒಂದು ಕಡೆಯ ವಂತಿಗೆ ಮಾತ್ರ ಇದ್ದಲ್ಲಿ ಸಿ.ಆರ್.ಎ ರವರ unequal contribution ಮೆನು ಅಡಿಯಲ್ಲಿ SCF ಅಪ್‌ಲೋಡ್ ಮಾಡಿ, CTS-9 ಬಿಲ್ಲಿನಲ್ಲಿ ಲೆಕ್ಕಶೀರ್ಷಿಕೆ 0071–01–900–0–00 (Deduct refunds) ರಿಂದ ಸಂಬಂಧಿಸಿದ ವಂತಿಗೆ ಮೊತ್ತವನ್ನು ಸೆಳೆದು ಪಾವತಿಗೆ ಕ್ರಮ ತೆಗೆದುಕೊಳ್ಳುವುದು.

16.7.

(ಪ್ರಕಾಶ್.ವೈ.ಕೆ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ವಿಶ್ರಾಂತಿ ವೇತನ).

ಇವರಿಗೆ:

1) ಸರ್ಕಾರದ ಮುಖ್ಯ ಕಾರ್ಯದರ್ಶಿ/ ಅಪರ ಮುಖ್ಯ ಕಾರ್ಯದರ್ಶಿಗಳು.
2) ಮಹಾಲೇಖಪಾಲರು (ಲೆಕ್ಕಪತ್ರ / ಲೆಕ್ಕಪರಿಶೋಧನೆ /ಆಡಿಟ್–1), ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
4) ಎಲ್ಲಾ ಇಲಾಖಾ ಮುಖ್ಯಸ್ಥರುಗಳು / ಎಲ್ಲಾ ಡಿ.ಡಿ.ಓ. ಗಳು.
5) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
6) ಎಲ್ಲಾ ಮಂಡಳಿಗಳು/ಮಹಾನಗರಪಾಲಿಕೆಗಳು/ಸೊಸೈಟಿಗಳು/ವಿಶ್ವವಿದ್ಯಾನಿಲಯಗಳು/ಅನುದಾನಿತ ಶಿಕ್ಷಣ ಸಂಸ್ಥೆಗಳು/ಸ್ವಾಯತ್ತ ಸಂಸ್ಥೆಗಳು.
7) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
8) ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
10) ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ / ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು.
11) ಕಾರ್ಯದರ್ಶಿ, ಇ–ಆಡಳಿತ, ಹೆಚ್‌ಆರ್‌ಎಂಎಸ್, ಬಹುಮಹಡಿ ಕಟ್ಟಡ.
12) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
13) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
14) ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು ಮತ್ತು ಎಲ್ಲಾ ಜಿಲ್ಲಾ ಖಜಾನೆಗಳು.
15) ಉಪನಿರ್ದೇಶಕರು, ನೂತನ ಪಿಂಚಣಿ ಘಟಕ, ವಿ.ವಿ.ಟವರ್, ಬೆಂಗಳೂರು.
16) ಎಲ್ಲಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
17) ನಿರ್ದೇಶಕರು, ಯೋಜನಾ ಇಲಾಖೆ(ನಗರ & ಗ್ರಾಮಾಂತರ), ಬಹುಮಹಡಿ ಕಟ್ಟಡ.
18) ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.
19) ಕಾರ್ಯದರ್ಶಿ, ವಿತ್ತೀಯ ಸುಧಾರಣೆ, ಆರ್ಥಿಕ ಇಲಾಖೆ, ಬಹುಮಹಡಿ ಕಟ್ಟಡ.
20) ವಾರಪತ್ರ / ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.